# <u>ಪರೀಕ್ಷೆಯ ಕುರಿತು ಚರ್ಚೆ</u>

ಪರೀಕ್ಷಾ ಭಯ ನಿವಾರಣೆ ಕುರಿತು 2018 ರಿಂದ ಪ್ರತಿವರ್ಷ ನಡೆಯುವ ಅತ್ಯುತ್ತಮ ವಾರ್ಷಿಕ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಲ್ಲಿ ಭಾರತದ ಗೌರವಾನ್ವಿತ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರು ದೇಶದಾದ್ಯಂತ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ನೇರ ಸಂವಾದ ನಡೆಸುತ್ತಾರೆ. ಅದರಲ್ಲೂ ಬೋರ್ಡ್‌ನ ಪರೀಕ್ಷೆ ತೆಗೆದುಕೊಳುವ ವಿದ್ಯಾರ್ಥಿಗಳ ಭಯ ಮತ್ತು ಸಂಶಯಗಳನ್ನು ನಿವಾರಿಸುತ್ತಾರೆ. ತಮ್ಮದೆ ಆದ ಸಲಹೆಗಳನ್ನು ನೀಡುತ್ತಾ ಬರುತ್ತಿದ್ದಾರೆ. ದೇಶದ ಪ್ರಧಾನಿಯೊಬ್ಬರು ಪ್ರಪ್ರಥಮ ಬಾರಿಗೆ ಈ ಪರೀಕ್ಷೆ ಮತ್ತು ಅಧ್ಯಯನ ಕುರಿತು ಮಕ್ಕಳ ಮನದ ಭಯ ನಿವಾರಿಸುವ ಅತಿದೊಡ್ಡ ಕಾರ್ಯಕ್ರಮ ಪರೀಕ್ಷಾ ಪೇ ಚರ್ಚೆಯಾಗಿದೆ.

ಕೋಟ್ಯಾನುಕೋಟಿ ಮಕ್ಕಳು ಪರೀಕ್ಷೆಯನ್ನ ಯಾವುದೇ ಭಯ ಆತಂಕಗಳಿಲ್ಲದೆ ಶಾಂತ ಮತ್ತು ಒತ್ತಡಮುಕ್ತವಾಗಿ ಬರೆಯುವ ಬಗ್ಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಬರುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ಪ್ರಧಾನಿಗಳು ನವದೆಹಲಿಯ ಭಾರತಮಂಟಪದಲ್ಲೂ ಈ ಅದ್ಬುತ ವಾರ್ಷಿಕ ಸಮಾವೇಶವನ್ನು ನಡೆಸುತ್ತಾ ಬರುತ್ತಿದ್ದಾರೆ. ಪರೀಕ್ಷಾ ಭಯದಿಂದ ಭಯಭೀತರಾಗಿದ್ದ ಲಕ್ಷಾನುಲಕ್ಷ ಹದಿಹರೆಯದ ಮನಗಳ ಪ್ರಶ್ನೆಗಳಿಗೆ ಬಹುಶಾಂತ ಮುಕ್ತಮನದಿಂದ ಉತ್ತರಿಸುತ್ತಾರೆ. ಈ ಕಾರ್ಯಕ್ರಮಕ್ಕೆ ಭಾಗವಹಿಸುವವರನ್ನು ಸ್ಪರ್ಧೆಯ ಮೂಲಕ ಆಯ್ಕೆ ಮಾಡಿ ವಿಜೇತರು ಪ್ರಧಾನಮಂತ್ರಿಗಳೊಂದಿಗೆ ನೇರವಾಗಿ ಸಂವಾದಿಸುವ ಅವಕಾಶ ಪಡೆಯುತ್ತಾರೆ. ವಿದ್ಯಾರ್ಥಿಗಳು ರೀಲ್‌ಗಳನ್ನು ನೋಡುತ್ತಾ ಸಮಯ ಕಳೆಯದೆ ಉತ್ತಮ ಆರೋಗ್ಯಕರ ಮನಸ್ಥಿತಿ ಬೆಳೆಸಿಕೊಳ್ಳಲು ಸಾಕಷ್ಟು ನಿದ್ದೆ ಮಾಡಿ ಎಂದು ಹೇಳುತ್ತಾರೆ. ನೀವೆಲ್ಲ ಪರೀಕ್ಷಾ ಯೋಧರು ಕ್ರಮಬದ್ಧವಾದ ಅಧ್ಯಯನ ಅವಶ್ಯಕವೆಂದು ಹೇಳುತ್ತಾರೆ. ದೇಶದ ಪ್ರಧಾನಿಯೊಬ್ಬರು ಮಕ್ಕಳ ಮನದಾಳಕ್ಕಿಳಿದ್ದು ಅವರ ಸಮಸ್ಯೆಗಳನ್ನು ಶಾಂತತೆಯಿಂದ ನಿವಾರಿಸುತ್ತಿರುವುದು ಕೋಟ್ಯಾನುಕೋಟಿ ವಿದ್ಯಾರ್ಥಿಗಳು ಭಯಾತಂಕವಿಲ್ಲದೆ ಪರೀಕ್ಷೆ ಬರೆದು, ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಪರೀಕ್ಷಾ ಪೆ ಚರ್ಚಾ ಅತ್ಯುತ್ತಮ ಕಾರ್ಯಕ್ರಮವಾಗಿದೆ. ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿ ಪರೀಕ್ಷೆ ಭಯ ನಿವಾರಿಸಿಕೊಂಡು ಭಾರತದ ಅತ್ಯುತ್ತಮ ಪ್ರಜೆಗಳಾಗಬೇಕೆಂದು ನನ್ನ ಕಳಕಳಿಯ ಮನವಿಯಾಗಿದೆ.

ಶ್ರೀ ನಾಗರಾಜಯ್ಯ ಸಿ.ಎಸ್.
ಕನ್ನಡ ಶಿಕ್ಷಕರು
ಎಸ್.ಜ್.ಆರ್.ಪಬ್ಲಿಕ್ ಸ್ಕೂಲ್
ರಾಜಾಜಿನಗರ,ಬೆಂಗಳೂರು.

<u>ಪರೀಕ್ಷಾ ಭಯ ನಿವಾರಕ ಪ್ರಧಾನ ಸೇವಕ</u>

ಪರಿಕ್ಷೆ.... ಪರೀಕ್ಷೆ ಇದೊಂದು ಬಹುತೇಕ ವಿದ್ಯಾರ್ಥಿಗಳಿಗೆ ಯಮಶಿಕ್ಷೆ.

ಇದನ್ನರಿತ ನಮ್ಮ ದೇಶದ ಹೆಮ್ಮೆಯ ಪ್ರಧಾನ ಸೇವಕರು

ಕಳೆದೆಂಟು ವರುಷಗಳಿಂದ ಮಕ್ಕಳ ಮನದತಾಂಕವ ನಿವಾರಿಸುವ

ಪರೀಕ್ಷೆಗಳನ್ನ ಸುಗಮವಾಗಿ ಬರೆಯಲು ಪರೀಕ್ಷಾ ಪೆ ಚರ್ಚಾ ಪ್ರಾರಂಭಿಸಿದ ನಿಮಗೆ **ನಮೋ ನಮಃ**

ಮಾನವ ಬಾಳೆಂಬ ದೋಣಿಯಲ್ಲಿ ಹಲವು ಏರಿಳಿತಗಳ ಪರೀಕ್ಷೆ ಎದುರಿಸುವ

ರೈತ ದವಸ–ಧಾನ್ಯಗಳನ್ನು ಬೆಳೆಯಲು ಬೀಜಭಿತ್ತಿ ಹಲವು ಪರೀಕ್ಷೆ ಎದುರಿಸುವ

ಹಾಗೇ ವಿದ್ಯಾಸಾಗರದಲ್ಲಿ ಪರೀಕ್ಷಾಯೋಧರು ಪ್ರಶ್ನೆಗಳೆಂಬ ಶತ್ರುಗಳೆನ್ನೆದುರಿಸದೇ ಹತಾಶರಾಗುವ,

ಬೇಸತ್ತು ಜೀವವನ್ನೇ ಕಳೆದುಕೊಳ್ಳುವ ದುಸ್ಥಿತಿ ತಿಳಿದು ಆ ಮನಗಳಲ್ಲೂ ನವೋತ್ಸಾಹ, ನವೊಲ್ಲಾಸ

ತುಂಬಿದ ಶಿವನಿಗೆ ನವೋನಮಃ

ದೇಶದಾದ್ಯಂತ ಸ್ಪರ್ಧೆಯ ನಡೆಸಿ ಆ ಮೂಲಕ ಮಕ್ಕಳನ್ನಾರಿಸಿ

ದೆಹಲಿಯ ಭಾರತ ಮಂಟಪದಲ್ಲಿ ಕಾರ್ಯಕ್ರಮ ಏರ್ಪಡಿಸಿ

ನೇರ–ನೇರವಾಗಿ ಮಕ್ಕಳ ಮನದಾಳದ ಪರೀಕ್ಷೆ ಅಧ್ಯಯನದ ವಿಧಾನ

ಸರ್ವಸಮಸ್ಯೆಗಳನ್ನು ಬಹುಮುಗ್ಧ ಮನದಿ ಮಕ್ಕಳ ಮನದಾನಕ್ಕಿಳಿದು

ಶಾಂತತೆಯಿಂದ ಈ ಬಹುದೊಡ್ಡ ಪರೀಕ್ಷಾ ಭಯೋತ್ಸವ ನಿವಾರಿಪ ಮಹೋನ್ನತರರಿಗೆ ನಮೋ ನಮಃ

'ಎಕ್ಸಾಮ್ ವಾರಿಯರ್ಸ್' ಎಂಬ ಪುಸ್ತಕವ ಬರೆದು ಪರೀಕ್ಷಾ ಒತ್ತಡ ಎದುರಿಸುವ

ವಿದ್ಯಾರ್ಥಿ ಸಮೂಹಕ್ಕೆ ನೆರಳಾಗಿ, ದೇಶದಾದ್ಯಂತ ಕೋಟ್ಯಾನುಕೋಟಿ ಮಕ್ಕಳಿಗೆ ನೆರವಾಗಿ

ನವದೇಶ ರೂಪಿಸುವ ನವ ಪ್ರಜೆಗಳ ನವಭವಿಷ್ಯ ರೂಪಿಸಿದ

ನವೋತ್ಸಾಹದ ನಿಮ್ಮ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮಕ್ಕೆ ತಮ್ಮ ಈ ಶ್ಲಾಘನೀಯ ಮಹೋತ್ಸವಕ್ಕೆ
ನಮೋ ನಮಃ.

ಶ್ರೀ ನಾಗರಾಜಯ್ಯ ಸಿ.ಎಸ್.
ಕನ್ನಡ ಶಿಕ್ಷಕರು
ಎಸ್.ಜ್.ಆರ್.ಪಬ್ಲಿಕ್ ಸ್ಕೂಲ್
ರಾಜಾಜಿನಗರ,ಬೆಂಗಳೂರು.